# ಗುರು ಶಿಷ್ಯರು



ಪೂರ್ವ ಕಾಲದಲ್ಲಿ ಅಮರಾವತಿ ರಾಜ್ಯಕ್ಕೆ ಸೇರಿದ ಗ್ರಾಮದಲ್ಲಿ ಒಬ್ಬ ಪಶುಗಳನ್ನು ಕಾಯುವವನಿದ್ದನು. ಅವನ ಹೆಸರು ಗೋವಿಂದ. ಬುದ್ಧಿಹೀನನು, ಯಾರು ಏನೇ ಹೇಳಿದರೂ ಅದೇ ನಿಜವೆಂದು ನಂಬುತ್ತಿದ್ದನು. ಗ್ರಾಮದಲ್ಲಿರುವ ಪಶುಗಳನ್ನೆಲ್ಲಾ ಹೊಡೆದುಕೊಂಡು, ಮೇಯಿಸಲು ಹೋಗುವುದು ಅವನ ಕೆಲಸ.

ಒಂದು ದಿನ ಗೋವಿಂದ ಪಶುಗಳನ್ನು ಗ್ರಾಮದಿಂದ ದೂರಕ್ಕೆ ಮೇಯಿಸಲು ಹೊಡೆದುಕೊಂಡು ಹೋದವನು ಅವುಗಳು ಮೇಯುತ್ತಿರಲು ಅಲ್ಲಿನ ಒಂದು ಗಿಡದ ಕೆಳಗೆ ಮಲಗಿ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದನು. ಸರಿಯಾಗಿ ಅದೇ ಸಮಯಕ್ಕೆ ದಾರಿಯಲ್ಲಿ ಹೋಗುತ್ತಿದ್ದ ಒಬ್ಬ ಸನ್ಯಾಸಿ ಬಿಸಿಲಿನ ಬೇಗೆ ತಡೆದುಕೊಳ್ಳಲಾಗದೆ, ಅದೇ ಮರದ ಕೆಳಗೆ ಬಂದು ಕುಳಿತುಕೊಂಡನು. ಅಲ್ಲಿ ತನ್ನ ಜೋಳಿಗೆಯನ್ನು ಕೆಳಗಿಳಿಸಿ ಸಮೀಪದಲ್ಲಿರುವ ನದಿಯಲ್ಲಿ ಸ್ನಾನ ಮಾಡಿ ದಡದಲ್ಲಿ ಸ್ವಲ್ಪ ಹೊತ್ತು ಧ್ಯಾನದಲ್ಲಿ ಕುಳಿತುಕೊಂಡು, ಜೋಳಿಗೆಯಿಂದ ಎರಡು ರೊಟ್ಟಿಗಳನ್ನು ತೆಗೆದುಕೊಂಡು ತಿಂದು ಅಲ್ಲಿಂದ ಹೊರಟು ಹೋಗಲು ಅಣಿಯಾದನು. ಇದೆಲ್ಲವನ್ನು ನೋಡುತ್ತಿದ್ದ ಗೋವಿಂದ 'ಸ್ವಾಮಿ, ನೀವು ಇದುವರೆಗೂ ನದಿಯ ದಡದಲ್ಲಿ ಮೂಗನ್ನು ಮುಚ್ಚಿಕೊಂಡು ಕುಳಿತುಕೊಂಡಿದ್ದೀರಿ, ಹಾಗೇಕೆ ಮಾಡಿದಿರಿ ಸ್ವಾಮೀ?' ಎಂದು ಕೇಳಿದ.

'ಧ್ಯಾನ ಮಾಡಿದೆ' ಎಂದ ಸನ್ಯಾಸಿ. 'ಧ್ಯಾನ ಎಂದರೇನು?' ಎಂದು ಕೇಳಿದ ಗೋವಿಂದ.

'ಅದಾ! ನಿನಗೆ ಅರ್ಥವಾಗುವಂತೆ ಹೇಳುತ್ತೇನೆ ಕೇಳು. ಹಾಗೆ ಮೂಗು ಮುಚ್ಚಿಕೊಂಡು ಕುಳಿತರೆ ದೇವರು ಕಾಣಿಸುತ್ತಾನೆ. ನಾನು ಪ್ರತಿ ದಿನ ದೈವ ದರ್ಶನ ಮಾಡಿಕೊಳ್ಳುತ್ತೇನೆ. ಅರ್ಥವಾಯಿತಾ!' ಎಂದನು ಸನ್ಯಾಸಿ ಅಲ್ಲಿಂದ ತನ್ನ ದಾರಿಯಲ್ಲಿ ಪ್ರಯಾಣಿಸಿದ.

ಗೋವಿಂದನಿಗೆ ಅದೆಲ್ಲಾ ಕೇಳಿ ಆಶ್ಚರ್ಯವಾಯಿತು. ನದಿಯಲ್ಲಿ ಸ್ನಾನ ಮಾಡಿ, ಪದ್ಮಾಸನ ಹಾಕಿ ನದಿ ದಡದಲ್ಲಿ ಕಣ್ಣು ಮುಚ್ಚಿಕೊಂಡು ಕುಳಿತು, ಮೂಗನ್ನು ಗಟ್ಟಿಯಾಗಿ ಕೈಯಿಂದ ಮುಚ್ಚಿಕೊಂಡನು. ದೇವರು ಬಂದನೇನೋ ಎಂದು ಆಗಿಂದಾಗ ಕಣ್ಣು ತೆರೆದು ನೋಡುತ್ತಿದ್ದನು. ಉಸಿರಾಡಲು ಎಷ್ಟೋ ಅವಸ್ಥೆ ಪಟ್ಟನು. ಆದರೆ ದೇವರು ಮಾತ್ರ ಬರಲಿಲ್ಲ. ಏನಾದರೂ ಆಗಲಿ, ಪ್ರಾಣ ಹೋದರೂ ಸರಿ. ದೇವರನ್ನು ನೋಡೇ ತೀರಬೇಕೆಂದು ಶಪಥ ಮಾಡಿದ ಗೋವಿಂದ ಗಟ್ಟಿಯಾಗಿ ಮೂಗು ಮುಚ್ಚಿಕೊಂಡನು. ಈ ಮೂರ್ಖ ಭಕ್ತನನ್ನು ಮೇಲಿಂದ ವಿಷ್ಣುಮೂರ್ತಿ ಗಮನಿಸಿದನು. ಅಯ್ಯೋ ಅನ್ಯಾಯವಾಗಿ ಪ್ರಾಣ ಕಳೆದುಕೊಳ್ಳುತ್ತಿದ್ದಾನಲ್ಲ! ಈತನಿಗೆ ಇನ್ನೂ ಆಯುಷ್ಯವಿದೆ. ಅದಕ್ಕಾಗಿ ನಾನು ಪ್ರತ್ಯಕ್ಷನಾದರೆ ತಪ್ಪಾಗದು ಎಂದು ಗೋವಿಂದನ ಎದುರು ಪ್ರತ್ಯಕ್ಷನಾದನು.

'ಗೋವಿಂದಾ, ಕಣ್ಣು ತೆರೆದು ನೋಡು. ನಾನು ವಿಷ್ಣು ಮೂರ್ತಿ. ನಿನಗಾಗಿ ಬಂದಿದ್ದೇನೆ' ಎಂದನು.

# ಹೊಸ ವರುಷ

ಒಂದರಿಂದ ಮಗ್ಗಿಯು ಮೊದಲಿಗೆ
ಹನ್ನೆರಡು ತಿಂಗಳು ವರುಷದ ಎಣಿಕೆಗೆ
ಸಂಕ್ರಾಂತಿ ಜನವರಿಯಲ್ಲಿ
ಫೆಬ್ರುವರಿಗೆ ಶಿವನ ಧ್ಯಾನದಲ್ಲಿ
ಯುಗಾದಿ ಮಾರ್ಚ್‌ನಲ್ಲಿ ಬರಲಿದೆ
ಏಪ್ರಿಲ್ ಬಸವಣ್ಣನವರನ್ನು ತರಲಿದೆ
ದುಡಿಮೆಯ ದೇವರು ಮೇ ಬಂದಾಗ
ಜೂನ್‌ನಲ್ಲಿ ಶಾಲೆ ಬಾಗಿಲು ತೆರೆದಾಗ
ಬಿಸಿಲಿನ ಬೇಗೆ ಜುಲೈಗೆ
ಆಗಸ್ಟ್‌ನಲ್ಲಿ ಸ್ವತಂತ್ರ, ವಿನಾಯಕನ ಜೊತೆಗೆ
ವಿಜಯದಶಮಿ ಸೆಪ್ಟೆಂಬರ್ ಕೊನೆಯಲ್ಲಿ
ಗಾಂಧಿ ಬರುವುದು ಅಕ್ಟೋಬರ್ ಮೊದಲಲ್ಲಿ
ನವಂಬರ್‌ನಲ್ಲಿ ಕನ್ನಡ ಉತ್ಸವ ಪೂರ್ತಿ
ಡಿಸಂಬರ್ ಕಡೆಯದೆಂಬ ಕೀರ್ತಿ.

**–ಶಿವನಾಪುರ ನರಸಿಂಹಮೂರ್ತಿ, ಬೆಂಗಳೂರು**